2024-26ನೇ ಸಾಲಿಗೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಎಸ್.ಐ.ಡಿ.ಸಿ), ತಾಂತ್ರಿಕ ವಿಭಾಗದ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಭಿಯಂತರರ ಸೇವೆಯನ್ನು ಪಡೆಯಲು ಟೆಂಡರ್ ಆಹ್ವಾನಿಸುವ ಕುರಿತು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ,
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಣಿ ಸಂಖ್ಯೆ:ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560 010.
ಫೋನ್:080-2340 7011 to 25, ಫ್ಯಾಕ್ಸ್:91-2314 3566 / 2338 9070 ತಂತಿ: ಮೈಸ್ಮಾಲ್ ಕಾರ್ಪ್
ಇ-ಮೈಲ್:kssidcho@karnatakagov.in ವೆಬ್ ಸೈಟ್:www.kssidc.kar.nic.in

---

ಸಂಖ್ಯೆ:ಕರಾಸಕೈಅನಿನಿ/ಅಭಿಯಂತರ/ಗುತ್ತಿಗೆ/2024-26 ದಿನಾಂಕ 5 MAR 2024

ವಿಷಯ: 2024-26ನೇ ಸಾಲಿನಲ್ಲಿ ನಿಗಮಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಿವಿಲ್ ಅಭಿಯಂತರರ ಸಿಬ್ಬಂದಿ ಸೇವೆಯನ್ನು ಪಡೆಯಲು ಇ-ಟೆಂಡರ್ ಆಹ್ವಾನಿಸಿರುವ ಬಗ್ಗೆ.

-----------

2024-26ನೇ ಸಾಲಿನಲ್ಲಿ ನಿಗಮಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಸಿವಿಲ್/ವಿದ್ಯುತ್ ಇಂಜಿನಿಯರ್‌ಗಳ ಸೇವೆಯನ್ನು ಪಡೆಯಲು ಅರ್ಹ ಏಜೆನ್ಸಿ/ಸಂಸ್ಥೆಗಳ ಮುಖಾಂತರ ಇ-ಟೆಂಡರ್ ಜಾಲಾತಾಣ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಈ ಕೆಳಕಂಡ ಷರತ್ತುಗಳನ್ವಯ ದಿನಾಂಕ 18.03.2024 ಸಂಜೆ 4.30 ಗಂಟೆಯೊಳಗೆ ಅರ್ಜಿಯನ್ನು ಸಲ್ಲಿಸಬಹುದು. ಇ.ಎಂ.ಡಿ. ಮೊತ್ತ ರೂ.1,60,000/- ( ರೂಪಾಯಿ ಒಂದು ಲಕ್ಷದ ಅರವತ್ತು ಸಾವಿರ ಮಾತ್ರ ) ಇ-ಪ್ರೊಕ್ಯೂರ್‌ಮೆಂಟ್ ಪ್ರಕಾರದಂತೆ ಪಾವತಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕರಾಸಕೈಅನಿನಿ ದೂರವಾಣಿ ಸಂಖ್ಯೆ **8884415844** ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

**-: ಟೆಂಡರ್ ಪ್ರಕಟಣೆಯ ವಿವರ :-**

1. ಟೆಂಡರ್ ಡಾಕ್ಯುಮೆಂಟ್‌ನ್ನು https://eproc.karnataka.gov.in ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ, ಅವಧಿ ವಿಸ್ತರಣೆ ಹಾಗೂ ಇತರೆ ಹೆಚ್ಚಿನ ಸೂಚನೆಗಳನ್ನು ಸಂಬಂಧಿಸಿದ ವೆಬ್‌ಸೈಟ್ ಮೂಲಕವೇ ಪಡೆಯತಕ್ಕದ್ದು.
2. ಮೇಲ್ಕಂಡ ಸೇವೆಯನ್ನು ಒದಗಿಸಲು ಆಸಕ್ತರಿರುವ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವ ಸಂಸ್ಥೆಗಳು ಇ-ಗವರ್ನೆನ್ಸ್ ಇಲಾಖೆಯಲ್ಲಿ ನೋಂದಣಿ ಪಡೆದು ಡಿಜಿಟಲ್ ಸಹಿಯನ್ನು ದೃಢೀಕರಣ ಪಡೆಯಬೇಕಾಗಿರುತ್ತದೆ. ಸದರಿ ನೋಂದಣಿ ಹಾಗೂ ದೃಢೀಕರಣ ಪಡೆಯುವ ಸಂಬಂಧ ವಿವರವಾದ ಸೂಚನೆಗಳನ್ನು ನಿಗಮದ ವೆಬ್‌ಸೈಟ್ www.kssidc.co.in ಮೂಲಕವೇ ಪಡೆಯಬಹುದಾಗಿರುತ್ತದೆ.

| ಟೆಂಡರ್‌ನ ವೇಳಾಪಟ್ಟಿ ಹಾಗೂ ವಿವರಗಳು | | |
|---|---|---|
| 1 | ಟೆಂಡರ್ ಬಿಡ್‌ಗಳನ್ನು ವೆಬ್‌ಸೈಟ್ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಲಭ್ಯವಾಗುವ ದಿನಾಂಕ | 08.03.2024 10.00 AM |
| 2 | ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ವೆಬ್‌ಸೈಟ್ ಮೂಲಕ) | 18.03.2024 4.30 PM |
| 3 | ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ & ಅವಧಿ | 19.03.2024 5.00 PM |
| 4 | ಆರ್ಥಿಕ ಬಿಡ್‌ಗಳನ್ನು ತೆರೆಯಬಹುದಾದ ದಿನಾಂಕ & ಅವಧಿ | ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ |
| 5 | ಇ.ಎಂ.ಡಿ. ಮೊಬಲಗು(ವಿದ್ಯುನ್ಮಾನ ಪ್ರಕ್ರಿಯೆ ಮೂಲಕ ಮಾತ್ರ) | **1,60,000.00** |

3. ಟೆಂಡರ್ ಡಾಕ್ಯುಮೆಂಟನ್ನು ಡೌನ್‌ಲೋಡ್ ಮಾಡಿಕೊಳ್ಳುವ ಹಾಗೂ ಸಂಬಂಧಿಸಿದ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಡಳಿತ), ಕರಾಸಕೈಅನಿನಿ, ಇಲ್ಲಿ ಕಛೇರಿ ಅವಧಿಯಲ್ಲಿ ವಿಚಾರಿಸಬಹುದಾಗಿದೆ ಹಾಗೂ ದೂರವಾಣಿ ಸಂಖ್ಯೆ: 8884415844 ಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ರುಜು/-

ವ್ಯವಸ್ಥಾಪಕ ನಿರ್ದೇಶಕರು
ಕರಾಸಕೈಅನಿನಿ, ಬೆಂಗಳೂರು

ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ,

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಣಿ ಸಂಖ್ಯೆ:ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560 010.

ಫೋನ್:080-2340 7011 to 25, ಫ್ಯಾಕ್ಸ್:91-2314 3566 / 2338 9070 ತಂತಿ: ಮೈಸ್ಮಾಲ್ ಕಾರ್ಪ್

ಇ-ಮೈಲ್:kssidcho@karnatakagov.in ವೆಬ್ ಸೈಟ್:www.kssidc.kar.nic.in

---

ಸಂಖ್ಯೆ: ಕರಾಸಕೈಅನಿನಿ/ಅಭಿಯಂತರ/ಗುತ್ತಿಗೆ/2024-26 ದಿನಾಂಕ 5 MAR 2024

## -: ಟೆಂಡರ್‌ದಾರರಿಗೆ ಸೂಚನೆಗಳು :-

2024-26ನೇ ಸಾಲಿನಲ್ಲಿ ಅಧೀಕ್ಷಕ ಅಭಿಯಂತರರು, ಕರಾಸಕೈಅನಿನಿ ಕಛೇರಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಿಬ್ಬಂದಿ ಸೇವೆಯನ್ನು ಅರೆಕಾಲಿಕ ಸಿವಿಲ್/ವಿದ್ಯುತ್ ಅಭಿಯಂತರರ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಕುರಿತು ಟೆಂಡರ್ ಪ್ರಕಟಣೆ

1. ಅಭಿಯಂತರರು(ಸಿವಿಲ್/ವಿದ್ಯುತ್), ನೌಕರರ ಸೇವೆಯನ್ನು ಹೊರಗುತ್ತಿಗೆಯಿಂದ ಪಡೆಯಲು ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ (ಇ-ಪ್ರೊಕ್ಯೂರ್‌ಮೆಂಟ್ ವೆಬ್ ಪೋರ್ಟಲ್) ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದೆ.

   ಪ್ರಸ್ತಾವನೆಯನ್ನು ಇ.ಎಂ.ಡಿ. ಮೊತ್ತ ರೂ.1,60,000/- ಗಳ ಜೊತೆಗೆ ಸಲ್ಲಿಸಬೇಕು. ಸದರಿ ಇ.ಎಂ.ಡಿ. ಮೊತ್ತವನ್ನು ಕನಿಷ್ಠ 90 ದಿನಗಳು ಪ್ರಸ್ತಾವನೆಯ ಮಾನ್ಯತೆ ಅವಧಿಗೆ ಹೆಚ್ಚುವರಿಯಾಗಿ ಕಾಯ್ದಿಡಲಾಗುತ್ತದೆ. ಸದರಿ ಕಛೇರಿಯ ತೀರ್ಮಾನದ ಮೇಲೆ ಈ ಮಾನ್ಯತೆ ಅವಧಿಯನ್ನು ವಿಸ್ತರಿಸಲಾಗುತ್ತದೆ.

ಇ.ಎಂ.ಡಿ.ಯನ್ನು ಇ-ಪ್ರೊಕ್ಯೂರ್‌ಮೆಂಟ್ ಖಾತೆಗೆ ಕೆಳಕಾಣಿಸಿದ ವಿಧಾನಗಳ ಮೂಲಕ ಜಮೆ ಮಾಡಬಹುದು.

- ಕ್ರೆಡಿಟ್ ಕಾರ್ಡ್
- ಇಂಟರ್ನೆಟ್ ಬ್ಯಾಂಕಿಂಗ್
- ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಫಂಡ್ ಟ್ರಾನ್ಸ್‌ಫರ್

ಯಾವುದೇ ಏಜೆನ್ಸಿಯ ಟೆಂಡರ್ ಪ್ರಸ್ತಾವನೆಯನ್ನು ಇ.ಎಂ.ಡಿ. ಮೊತ್ತ KSSIDC ಬ್ಯಾಂಕ್ ಇಲ್ಲಿ ಜಮೆಯಾಗಿರುವುದನ್ನು ಖಾತ್ರಿ ಪಡಿಸಿದ ನಂತರ ಮಾತ್ರ ಪರಿಶೀಲನೆಗೆ ಸ್ವೀಕರಿಸಲಾಗುತ್ತದೆ. ತಪ್ಪಿದಲ್ಲಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಗುತ್ತದೆ.

ಈ ಕೆಳಗಿನ ಷರತ್ತಿಗೆ ಒಳಪಟ್ಟು ಇ.ಎಂ.ಡಿ. ಮೊತ್ತವನ್ನು ಬಿಡ್ಡುದಾರರು ಜಮೆ ನೀಡಬೇಕು.

- ಇ.ಎಂ.ಡಿ. ಮೊತ್ತವನ್ನು ಎಲೆಕ್ಟ್ರಾನಿಕ್ ಕ್ಯಾಶ್ ರೂಪದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಖಾತೆಗೆ (ಡಿಮಾಂಡ್ ಡ್ರಾಫ್ಟ್, ಚೆಕ್ ಅಥವಾ ಬ್ಯಾಂಕ್ ಗ್ಯಾರಂಟೆಗಳನ್ನು ಸ್ವೀಕರಿಸಲಾಗುವುದಿಲ್ಲ) ಸ್ವೀಕರಿಸಲಾಗುತ್ತದೆ.

2. ಟೆಂಡರ್‌ನಲ್ಲಿ ಭಾಗವಹಿಸಿ ವಿಫಲರಾದ ಬಿಡ್ಡುದಾರರಿಗೆ ಇ.ಎಂ.ಡಿ. ಮೊತ್ತವನ್ನು ಬಿಡ್‌ನಲ್ಲಿ ಯಶಸ್ವಿಯಾದ ಬಿಡ್ಡುದಾರರ ಘೋಷಣೆಯಾದ ದಿನಾಂಕದಿಂದ 8 ವಾರದೊಳಗಾಗಿ ಹಿಂದಿರುಗಿಸಲಾಗುವುದು.

ಇ.ಎಂ.ಡಿ. ಮೊತ್ತವನ್ನು ಈ ಕೆಳಗಿನ ಪ್ರಕರಣಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

- ಬಿಡ್ಡುದಾರ ಪ್ರಸ್ತಾವನೆ ಬದಲಿಸಿದರೆ ಅಥವಾ ಹಿಂಪಡೆದರೆ
- ಬಿಡ್ಡುದಾರರ ಪ್ರಸ್ತಾವನೆಯ ಕೊನೆಯ ದಿನಾಂಕ ಹಾಗೂ ಪ್ರಸ್ತಾವನೆಯ ಮಾನ್ಯತಾ ಅವಧಿ ಕೊನೆಗೊಳ್ಳುವ ದಿನಾಂಕಗಳ ನಡುವೆ ಪ್ರಸ್ತಾವನೆಯನ್ನು ಹಿಂಪಡೆದರೆ
- ಯಶಸ್ವಿ ಬಿಡ್ಡುದಾರರ ಕಾರ್ಯಾಧಾರಿತ ಭದ್ರತಾ ಠೇವಣಿಯನ್ನು ನಿಗದಿತ ದಿನಾಂಕದೊಳಗೆ ನೀಡಲು ವಿಫಲರಾದರೆ
- ಟೆಂಡರ್ ದಾಖಲೆ ಪತ್ರಗಳಲ್ಲಿ ಬಿಡ್ಡುದಾರರು ನೀಡಿರುವ ಯಾವುದೇ ಮಾಹಿತಿ ಲೋಪ ದೋಷದಿಂದ ಕೂಡಿದ್ದರೆ ಅಥವಾ ಸುಳ್ಳೆಂದು ಸಾಬೀತಾದರೆ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
- ಯಶಸ್ವಿ ಬಿಡ್ಡುದಾರ ಕಾರ್ಯಾದೇಶ ಪಡೆದ ನಂತರ ನಿಗಿದತ ಸಮಯದೊಳಗೆ ಸೇವೆ ಒದಗಿಸಲು ವಿಫಲರಾದರೆ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
- ಯಶಸ್ವಿ ಬಿಡ್ಡುದಾರ ಕರಾರು ಒಪ್ಪಂದದ ನಿಬಂಧನೆಗಳನ್ನು ಪಾಲಿಸಲು ವಿಫಲರಾದರೆ ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಳ್ಳಬೇಕು.
- ಟೆಂಡರ್ ದಾಖಲೆ ಪತ್ರಗಳ ಜೊತೆಗೆ, ಟೆಂಡರ್ ಆಹ್ವಾನ ಪತ್ರ, ನಿಬಂಧನೆಗಳು ಮತ್ತು ಏಜೆನ್ಸಿಗಳಿಗೆ ಸೂಚನೆಗಳನ್ನು ಒಳಗೊಂಡಿರುತ್ತದೆ. ಜೊತೆಗೆ ತಾಂತ್ರಿಕ ಹಾಗೂ ಆರ್ಥಿಕ ಪ್ರಸ್ತಾವನೆಯ ನಮೂನೆಗಳನ್ನು ಒದಗಿಸಲಾಗಿದೆ.

**1. ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳು, ನಿಬಂಧನೆಗಳು ಹಾಗೂ ಒದಗಿಸಬೇಕಾದ ದಾಖಲೆಗಳು.**

1. ಇ-ಟೆಂಡರ್ ನಲ್ಲಿ ಭಾಗವಹಿಸುವ ಸಂಸ್ಥೆ/ಏಜೆನ್ಸಿ/ಸೊಸೈಟಿಯು ಸರ್ಕಾರದ ನಿಯಮಗಳಡಿಯಲ್ಲಿ ನೋಂದಾಯಿಸಿರಬೇಕು.
2. ಬಿಡ್‌ದಾರರು ಸಕ್ಷಮ ಪ್ರಾಧಿಕಾರದಿಂದ ಮಾನವ ಸೇವೆಯನ್ನು ಒದಗಿಸುತ್ತಾರೆ ಎಂಬ ಬಗ್ಗೆ ಪಡೆದ ನೋಂದಣಿ ಪ್ರಮಾಣ ಪತ್ರ ಹಾಗೂ ನವೀಕರಣ ಪ್ರಮಾಣ ಪತ್ರ ಲಗತ್ತಿಸಬೇಕು. ಸಂಸ್ಥೆಯವರು ಸಂಸ್ಥೆಯ ಹೆಸರು ಹಾಗೂ ವಿಳಾಸ ಹಾಗೂ ದೂರವಾಣಿ ಸಂಖ್ಯೆ ವಿವರ ನೀಡಲಾಗುವುದು. (ಸಂಸ್ಥೆಯು ಸರ್ಕಾರದ ಅಂಗೀಕೃತ ಚಾಲ್ತಿಯಲ್ಲಿರುವ ಪರವಾನಗಿ ಹೊಂದಿರಬೇಕು)
3. ಸಂಸ್ಥೆ/ಏಜೆನ್ಸಿಯ ಶಿಕ್ಷಣ ಇಲಾಖೆಯನ್ನು ಒಳಗೊಂಡಂತೆ ಸರ್ಕಾರದ ಇತರೆ ಇಲಾಖೆಗಳಲ್ಲಿ ಸಂಸ್ಥೆಯನ್ನು ಸರ್ಕಾರವು ಕಪ್ಪು ಪಟ್ಟಿಗೆ ಸೇರಿಸಿಲ್ಲವೆಂಬುದರ ಬಗ್ಗೆ ನೋಟರಿಯಿಂದ ಅಫಿಡೇವಿಟ್ ಸಲ್ಲಿಸುವುದು.
4. ಅಧಿಕೃತ ನೋಂದಣಿ ಹೊಂದಿರುವ ಚಾರ್ಟೆಡ್ ಅಕೌಂಟೆಂಟ್ ರವರಿಂದ 2018-19, 2019-20, 2020-21, 2021-22 ಮತ್ತು 2022-23ನೇ ಸಾಲಿನ ಆರ್ಥಿಕ ವರ್ಷಗಳ ಪರಿಶೋಧನೆ ತಃಖ್ತೆಗಳು ಹಾಗೂ ವಾರ್ಷಿಕ ವಹಿವಾಟಿನ ದೃಢೀಕರಣ ಪತ್ರವನ್ನು ಪತ್ಯೇಕವಾಗಿ ಲಗತ್ತಿಸಬೇಕು. ಟೆಂಡರ್‌ದಾರರ ವಾರ್ಷಿಕ ವಹಿವಾಟು ಹಿಂದಿನ 5 ವರ್ಷಗಳಲ್ಲಿ 2 ವರ್ಷಗಳಲ್ಲಿ ಕನಿಷ್ಠ ಟೆಂಡರ್ ಮೊತ್ತದ ದುಪ್ಪಟ್ಟು ವಹಿವಾಟು ಇರತಕ್ಕದ್ದು. ಸರಾಸರಿ ರೂ.80.00 ಲಕ್ಷಗಳ ಮೇಲೆ.
5. ಆದಾಯ ತೆರಿಗೆ ಕಾಯ್ದೆಯಡಿ ಈ ಹಿಂದಿನ 2 ವರ್ಷಗಳ (2021-22 ಮತ್ತು 2022-2023ನೇ) ಆರ್ಥಿಕ ವರ್ಷಗಳ ಆದಾಯ ತೆರಿಗೆ ರಿಟರ್ನ್ ಫೈಲ್ ಮಾಡಿದ ಚಲನ್‌ಗಳನ್ನು ಲಗತ್ತಿಸಬೇಕು. ಸಂಸ್ಥೆಯವರು ತಮ್ಮ ದೃಢೀಕೃತ ಪ್ಯಾನ್ ಕಾರ್ಡ್‌ನ ಛಾಯಾ ಪ್ರತಿಯನ್ನು ಲಗತ್ತಿಸಬೇಕು.

6. ಸಂಸ್ಥೆಯವರು ಮೂರು ವರ್ಷದ ಮಾನವ ಸಂಪನ್ಮೂಲ ಒದಗಿಸಿದ ಅನುಭವ ಪ್ರಮಾಣ ಪತ್ರ ಸಂಬಂದಪಟ್ಟ ಇಲಾಖೆಯಿಂದ ಪಡೆದು ಸಲ್ಲಿಸುವುದು. ಕಾರ್ಯಾದೇಶ ಪ್ರತಿಯನ್ನು ಸಲ್ಲಿಸಿದಲ್ಲಿ ಸೇವಾ ಪ್ರಮಾಣ ಪತ್ರವೆಂದು ಪರಿಗಣಿಸಿಲಾಗುವುದಿಲ್ಲ.
7. ಸೇವಾ ತೆರಿಗೆ ಮತ್ತು ಜಿ.ಎಸ್.ಟಿ. ನೋಂದಣಿ ಹೊಂದಿರಬೇಕು. ಈ ಹಿಂದಿನ 2021-22 ಮತ್ತು 2022-2023ನೇ ಆರ್ಥಿಕ ವರ್ಷಗಳ ಸೇವಾ ತೆರಿಗೆ ಮತ್ತು ಜಿ.ಎಸ್.ಟಿ ರಿಟರ್ನ್ ಪೈಲ್ ಮಾಡಿರುವ ಬಗ್ಗೆ ದಾಖಲೆಗಳನ್ನು ಲಗತ್ತಿಸಬೇಕು.
8. ಇ.ಎಸ್.ಐ ನೋಂದಣಿ ಹೊಂದಿರಬೇಕು. ಈ ಹಿಂದಿನ 2021-22 ಮತ್ತು 2022-2023ನೇ ಆರ್ಥಿಕ ವರ್ಷಗಳ ಇ.ಪಿ.ಎಫ್ ಕಂತುಗಳನ್ನು ಭರಣ ಮಾಡಿರುವ ಬಗ್ಗೆ ದಾಖಲೆಗಳನ್ನು ಮತ್ತು ಚಲನ್ ಲಗತ್ತಿಸಬೇಕು.
9. ಇ.ಪಿ.ಎಫ್ ನೋಂದಣಿ ಹೊಂದಿರಬೇಕು. ಈ ಹಿಂದಿನ 2021-22 ಮತ್ತು 2022-2023ನೇ ಆರ್ಥಿಕ ವರ್ಷಗಳ ಇ.ಪಿ.ಎಫ್ ಕಂತುಗಳನ್ನು ಭರಣ ಮಾಡಿರುವ ಬಗ್ಗೆ ದಾಖಲೆಗಳನ್ನು ಮತ್ತು ಚಲನ್ ಲಗತ್ತಿಸಬೇಕು.
10. ವೃತ್ತಿ ತೆರಿಗೆ ನೋಂದಣಿ ಹೊಂದಿರಬೇಕು. ಈ ಹಿಂದಿನ 2021-22 ಮತ್ತು 2022-2023ನೇ ಆರ್ಥಿಕ ವರ್ಷಗಳ ವೃತ್ತಿ ತೆರಿಗೆ ಕಂತುಗಳನ್ನು ಭರಣ ಮಾಡಿರುವ ಬಗ್ಗೆ ದಾಖಲೆಗಳನ್ನು ಮತ್ತು ಚಲನ್ ಲಗತ್ತಿಸಬೇಕು.

1 ಟೆಂಡರ್ ದಾಸ್ತಾವೇಜುಗಳಲ್ಲಿರುವ ದಾಖಲೆಗಳು:

- ಟೆಂಡರ್‌ದಾರರಿಗೆ ಸೂಚನೆಗಳು ಹಾಗೂ ನಿಬಂಧನೆಗಳು.
- ತಾಂತ್ರಿಕ ಪ್ರಸ್ತಾವನೆ-ನಿಗದಿತ ನಮೂನೆ.
- ಆರ್ಥಿಕ ಪ್ರಸ್ತಾವನೆ-ನಿಗದಿತ ನಮೂನೆ.
- ಟೆಂಡರ್‌ಗೆ ಸಂಬಂಧಿಸಿದಂತೆ ಸೂಚನೆಗಳು, ಷರತ್ತುಗಳು ಮತ್ತು ತಾಂತ್ರಿಕ ವಿವರಗಳು.

- ಬಿಡ್‌ದಾರರು ಮೇಲ್ಕಾಣಿಸಿದ ಎಲ್ಲಾ ದಾಖಲೆಗಳು, ನಿಬಂಧನೆಗಳು ಮತ್ತು ಟೆಂಡರ್‌ನ ಷರತ್ತುಗಳನ್ನು ಹಾಗೂ ಬಿಡ್‌ದಾರರಿಗೆ ಇರುವ ಅರ್ಹತಾ ಸೂಚನೆಗಳನ್ನು ಪರಿಶೀಲಿಸಿ ಅರ್ಹ ಮಾಡಿಕೊಂಡು ಸೂಕ್ತ ಮಾಹಿತಿ ಮತ್ತು ದಾಖಲೆಗಳೊಂದಿಗೆ ಪೂರ್ಣ ಪ್ರಮಾಣದಲ್ಲಿ ಟೆಂಡರ್ ಸಲ್ಲಿಸುವುದು. ಅಪೂರ್ಣ ಮಾಹಿತಿಯುಳ್ಳ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುದು.

**2. ಟೆಂಡರ್ ಬುಕ್‌ಲೆಟ್‌ನ ತಿದ್ದುಪಡಿ:**

ಟೆಂಡರ್ ಸಲ್ಲಿಸುವ ದಿನಾಂಕಕ್ಕೆ ಮುನ್ನಾ ಟೆಂಡರ್ ಬುಕ್‌ಲೆಟ್‌ನ ತಿದ್ದುಪಡಿ ಮಾಡುವ/ ಬದಲಾಯಿಸುವ ಅಧಿಕಾರ ಸಕ್ಷಮ ಪ್ರಾಧಿಕಾರ ಹೊಂದಿದೆ. ಈ ರೀತಿ ಯಾವುದೇ ತಿದ್ದುಪಡಿಯಾದಲ್ಲಿ ಅದನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್ ಪೋರ್ಟಲ್ ನಲ್ಲಿರುವ ಕೋರಿಜೆಂಡಮ್ ಮೂಲಕ ಹಾಗೂ ಯಾವುದೇ ವಿಷಯಗಳನ್ನು ಸೇರಿಸಿದ್ದಲ್ಲಿ ಅಡೆಂಡಮ್ ಮೂಲಕ ಅಥವಾ ನಿಗಮದ ಅಂತರ್ ಜಾಲದಲ್ಲಿ ತಿಳಿದುಕೊಳ್ಳಬೇಕು.

**3. ಟೆಂಡರ್ ಸಲ್ಲಿಸುವಿಕೆ:**

- ಬಿಡ್‌ದಾರರು ಇಲೆಕ್ಟ್ರಾನಿಕ್ ಮಧ್ಯಮ ಇ-ಪ್ರೊಕ್ಯೂರ್‌ಮೆಂಟ್ ವೆಬ್ ಪೋರ್ಟಲ್ (ವೆಬ್ ಹೆಸರು: https://eproc.karnataka.gov.in ಸಲ್ಲಿಸುವುದು.
- ಟೆಂಡರ್ ಪ್ರಸ್ತಾವನೆ ಸ್ವೀಕೃತಿ ದಿನಾಂಕವನ್ನು ವಿಸ್ತರಿಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.

<u>ಟೆಕ್ನಿಕಲ್ ಬಿಡ್‌ನಲ್ಲಿ ಕೆಳಕಂಡ ದಾಖಲೆಗಳ ಪ್ರತಿಗಳನ್ನು ಸ್ಕ್ಯಾನ್ ಮಾಡಿ ಸಲ್ಲಿಸುವುದು.</u>

1. ತಾಂತ್ರಿಕ ಬಿಡ್‌ಗಳಿಗೆ ಸಬಂಧಿಸಿದಂತೆ ಚೆಕ್ ಲಿಸ್ಟ್ ನಮೂನೆಯಲ್ಲಿಯೇ ಮಾಹಿತಿಯನ್ನು ಸಲ್ಲಿಸುವುದು.
2. ಪ್ರಚಲಿತ ಕಾನೂನಿನ ಪ್ರಕಾರ ಸಂಸ್ಥೆಯು ಸಕ್ಷಮ ಪ್ರಾಧಿಕಾರದಿಂದ ನೊಂದಣಿಯಾಗಿರುವ ಪ್ರಮಾಣ ಪತ್ರ ಹಾಗೂ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುತ್ತಾರೆ ಎಂಬ ಬಗ್ಗೆ ಮತ್ತು ಪ್ರಸ್ತುತ ವರ್ಷದವರೆಗೆ ನವೀಕರಣಗೊಂಡ ಮಾಹಿತಿ ಸಲ್ಲಿಸುವುದು.
3. ಟ್ರಸ್ಟ್ ಗಳನ್ನಾಗಿ ನೋಂದಾಯಿಸಿದವರು ನೋಂದಣಿ ಪತ್ರದೊಂದಿಗೆ ಬೈಲಾ ಪ್ರತಿಯನ್ನು ಸಲ್ಲಿಸುವುದು.
4. ಸಂಸ್ಥೆಯು PAN CARD ದೃಢೀಕೃತ ಜೆರಾಕ್ಸ್ ಪ್ರತಿ (Pan card) ಪ್ರಸ್ತಾವನೆ ಸಲ್ಲಿಸಿದ ನಂತರ ಮಾನವ ಸಂಪನ್ಮೂಲ ಸಂಸ್ಥೆಯ ಹೆಸರಿನಲ್ಲಿಯೇ ಇರತಕ್ಕದ್ದು.
5. 2018-19, 2020-21, 2021-2022 ಮತ್ತು 2022-23ನೇ (ಆರ್ಥಿಕ ವರ್ಷ) ಸಾಲಿನವರೆಗೆ ಆದಾಯ ತೆರಿಗೆ ಪಾವತಿಸಿರುವ ಬಗ್ಗೆ ದಾಖಲೆ ಸಲ್ಲಿಸುವುದು ಹಾಗೂ ಎರಡು ವರ್ಷಗಳ ಅವಧಿಯಲ್ಲಿ ಟೆಂಡರ್ ಮೊತ್ತದ ದುಪ್ಪಟ್ಟು ವಹಿವಾಟು ನಡೆಸಿರುವ ಬಗ್ಗೆ ಚಾರ್ಟೆಡ್ ಅಕೌಂಟೆಂಟ್ ರವರಿಂದ turn over ಪಡೆದ ಪ್ರಮಾಣ ಪತ್ರ ಸಲ್ಲಿಸುವುದು.
6. ಸೇವಾ ತೆರಿಗೆ ನೋಂದಣಿ ಪ್ರಮಾಣ ಪತ್ರ ಸಲ್ಲಿಸುವುದು ಮತ್ತು ಜಿಎಸ್‌ಟಿ ನೋಂದಣಿ ಪ್ರಮಾಣ ಪತ್ರ ಹಾಗೂ ಹಿಂದಿನ 2 ಆರ್ಥಿಕ ವರ್ಷಗಳಲ್ಲಿ ರಿಟರ್ನ್ ಪೈಲ್ ಮಾಡಿದ ಬಗ್ಗೆ ಮಾಹಿತಿ ಸಲ್ಲಿಸುವುದು. 2021-2022 ಮತ್ತು 2022-23
7. ಸಂಸ್ಥೆಯು ಅಭ್ಯರ್ಥಿಗಳಿಗೆ ಇ.ಎಸ್.ಐ ಮತ್ತು ಪಿ.ಎಫ್ ಪಾವತಿಸಲು ಸಂಬಂಧಪಟ್ಟ ಇಲಾಖೆಯ ನೋಂದಣಿ ಪ್ರಮಾಣ ಪತ್ರ ಹಾಗೂ ಈ ಹಿಂದಿನ ಎರಡು ವರ್ಷಗಳ ಅವಧಿಯಲ್ಲಿ (2021-2022 ಮತ್ತು 2022-23 ರ ಅವಧಿಗೆ ಪಾವತಿಸಿರುವ ಬಗ್ಗೆ ಪೂರಕ ದಾಖಲೆ ಒದಗಿಸುವುದು.)
8. ಸಂಸ್ಥೆಯು ಸರ್ಕಾರಿ/ಸರ್ಕಾರೇತರ ಸಂಸ್ಥೆಗಳಿಗೆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸೇವೆ ಒದಗಿಸಿರುವ ಬಗ್ಗೆ ಅನುಭವ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು (ಇಲಾಖಾ ಕಾರ್ಯದೇಶ ಪ್ರತಿಯನ್ನು ಲಗತ್ತಿಸಿದಲ್ಲಿ ಪರಿಗಣಿಸಲಾಗುವುದಿಲ್ಲ)
9. ಟೆಂಡರ್‌ಗೆ ಅರ್ಜಿ ಸಲ್ಲಿಸುವ ಸಂಸ್ಥೆ ಹಾಗೂ ಅದರ ಸಹ ಸಂಸ್ಥೆಗಳನ್ನು ಸರ್ಕಾರವು ಕಪ್ಪು ಪಟ್ಟಿಗೆ ಸೇರಿಸಿಲ್ಲವೆಂಬದರ ಬಗ್ಗೆ ನೋಟರಿಯಿಂದ ಅಫಿಡವಿಟ್ ಸಲ್ಲಿಸುವುದು.
10. ಸಂಸ್ಥೆಯು ಹೊಂದಿರುವ ಅರ್ಹ ಅಭ್ಯರ್ಥಿಗಳ ಪಟ್ಟಿ (ವಿದ್ಯಾರ್ಹತೆ ಬಗ್ಗೆ ವಿಧಿಸಿರುವ ಷರತ್ತಿನಂತೆ)

ಮೇಲ್ಕಂಡ ಎಲ್ಲಾ ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಅಪ್‌ಲೋಡ್ ಮಾಡುವುದು, ಟೆಂಡರ್ ತೆರೆದ ನಂತರ ಮೂಲ ದಾಖಲೆಗಳೊಂದಿಗೆ ಪರಿಶೀಲಿಸಲಾಗುವುದು.

## 5. ಟೆಂಡರ್ ತೆರೆಯುವುದು ಮತ್ತು ಮೌಲ್ಯ ಮಾಪನ ಮಾಡುವುದು:

- ಟೆಂಡರ್ ನಿಬಂಧನೆಗಳು ಮತ್ತು ಬಿಡ್‌ದಾರರು ಅಪಲೋಡ್ ಮಾಡಿದ ದಾಖಲೆಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಲಾಗುವುದು. ತಾಂತ್ರಿಕ ಮೌಲ್ಯಮಾಪನದ ಮಾನದಂಡಗಳನ್ನು ಈ ಕೆಳಗಿನಂತೆ ಪರಿಶೀಲಿಸಲಾಗುವುದು. ಕನಿಷ್ಠ 80 ಅಂಕಗಳನ್ನು ಪಡೆದ ಸಂಸ್ಥೆ/ಏಜೆನ್ಸಿಗಳ ಆರ್ಥಿಕ ಬಿಡ್ ಮಾತ್ರ ತೆರೆಯಲಾಗುವುದು.

ಸೂಚನೆಗಳು.

- ಮೇಲ್ಕಂಡ ಎಲ್ಲಾ ಕಾಯ್ದೆಗಳಲ್ಲಿ ನೋಂದಣಿ ಮಾಡಿದ ಬಗ್ಗೆ ನೋಂದಣಿ ಪ್ರಮಾಣ ಪತ್ರಗಳನ್ನು ಹಾಗೂ ಇತರೆ ಎಲ್ಲಾ ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಅದರ ಪ್ರತಿಗಳನ್ನು ಅಪಲೋಡ್ ಮಾಡಬೇಕು.
- ವೃತ್ತಿ ತೆರಿಗೆ ಇ.ಎಸ್‌ಐ, ಇಪಿಎಫ್ ಹಾಗೂ ಸೇವಾತೆರಿಗೆ ನೋಂದಣಿ ಹೊಂದಿರದೆ ಇದ್ದ ಪಕ್ಷದದಲ್ಲಿ ಅಂತಹ ಸಂಸ್ಥೆ/ಏಜನ್ಸಿಯ ಟೆಂಡರ್ ಬಿಡ್ ತಿರಸ್ಕರಿಸಲಾಗುವುದು.
- ಮೇಲ್ಕಾಣಿಸಿದ ಎಲ್ಲಾ ದಾಸ್ತಾವೇಜು/ ದಾಖಲೆ ಪತ್ರಗಳ ಮೂಲ ದಾಖಲೆಗಳನ್ನು ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸೂಚಿಸಿದಾಗ ಹಾಜರುಪಡಿಸಬೇಕು.
- ಈ ಮೇಲಿನ ಸೂಕ್ತ ಅರ್ಹತೆಗಳು ಇಲ್ಲದಿದ್ದಲ್ಲಿ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.

## 6. ಆರ್ಥಿಕ ಬಿಡ್

ಆರ್ಥಿಕ ಬಿಡ್‌ನ್ನು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡುವಾಗ ಸೇವಾ ಶುಲ್ಕ ಶೇಕಡವಾರು ಆದಾರದಲ್ಲಿ ಮಾತ್ರ ಸಲ್ಲಿಸಬೇಕು. ಅಲ್ಲದೆ ಸೇವಾ ಶುಲ್ಕವನ್ನು ರೂಪಾಯಿಗಳಲ್ಲಿ ದಾಖಲಿಸಿದರೆ ಪರಿಗಣಿಸುವುದಿಲ್ಲ. ಮತ್ತು ಸೇವಾ ಶುಲ್ಕ ನಮೂದಿಸುವಾಗ ಅಂಕಿ ಮತ್ತು ಅಕ್ಷರಗಳಲ್ಲಿ ನಮೂದಿಸುವುದು ಕಡ್ಡಾಯ. ಅಕ್ಷರಗಳಲ್ಲಿ ನಮೂದಿಸಲಾದ ದರವನ್ನೇ ಅಂತಿಮವಾಗಿ ಪರಿಗಣಿಸಲಾಗುವುದು.

## 7. ಟೆಂಡರ್ ಅವಾರ್ಡ್ ಮಾಡುವುದು.

- ತಾಂತ್ರಿಕ ಪ್ರಸ್ತಾವನೆಯ ಅರ್ಹತೆಯಾಧಾರದನ್ವಯ ಮೌಲ್ಯಮಾಪನ ಮಾಡಿ, ಸಮರ್ಪಕವಾಗಿ ಅಥವಾ ಅತೀ ಹೆಚ್ಚು ಅರ್ಹತೆ ಹೊಂದಿರುವ ಸಂಸ್ಥೆಗಳನ್ನು ಮಾತ್ರ ಆರ್ಥಿಕ ಪ್ರಸ್ತಾವನೆಯ ಹಂತದಲ್ಲಿ ಪರಿಗಣಿಸಲಾಗುವುದು.
- ಆರ್ಥಿಕ ಬಿಡ್‌ನಲ್ಲಿ ಹೇಳಿರುವ ಅಂಶದ ಮೇಲೆ, ಅತೀ ಕಡಿಮೆ ದರವನ್ನು ನಮೂದಿಸಿದ ಟೆಂಡರ್‌ದಾರರನ್ನು ಯಶಸ್ವಿ ಟೆಂಡರ್ ದಾರರೆಂದು ಪರಿಗಣಿಸಿ, ಅವರಿಗೆ ಕಾರ್ಯಾದೇಶ ನೀಡಲಾಗುವುದು. ಅವಶ್ಯವಿದ್ದಲ್ಲಿ ಕಡಿಮೆದರ ನಮೂದಿಸಿದ ಟೆಂಡರ್ ದಾರರೊಡನೆ ದರ ನಿಗದಿಗಾಗಿ ನೆಗೋಷಿಯೇಷನ್ ಮಾಡಲು ಟೆಂಡರ್ ಕರೆದಿರುವ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.
- ಆರ್ಥಿಕ ಬಿಡ್‌ನಲ್ಲಿ ವಿವಿಧ ಸಂಸ್ಥೆ/ಏಜನ್ಸಿಗಳು ಸಮನಾದ (ಒಂದೇ) ಶೇಕಡ ಆಧಾರದ ಸೇವಾ ಶುಲ್ಕ ದಾಖಲಿಸಿದ್ದಲ್ಲಿ
  1) ಆ ಸಂಸ್ಥೆಗಳ ಕಳೆದ ಹಿಂದಿನ ಎರಡು ವರ್ಷಗಳ 2021-22 ಮತ್ತು 2022-23 ಆರ್ಥಿಕ ವಹಿವಾಟು (TURN OVER) ಪರಿಶೀಲಿಸಿ ಯಾವ ಸಂಸ್ಥೆಯ ಹೆಚ್ಚಿನ ವಹಿವಾಟು ಇರುತ್ತದೊ ಆ ಸಂಸ್ಥೆಗೆ ಆರ್ಥಿಕ ಬಿಡ್‌ನಲ್ಲಿ ಎಲ್-1 ಎಂದು ಪರಿಗಣಿಸಲಾಗುವುದು.
  2) ಸಂಸ್ಥೆಯು ಕಳೆದ ಹಿಂದಿನ 05 ವರ್ಷಗಳ ಅವಧಿಯಲ್ಲಿ ಒದಗಿಸಿದ ಮಾನವ ಸಂಪನ್ಮೂಲ ಸೇವೆಯನ್ನು ಪರಿಗಣಿಸಲಾಗುವುದು. ಮೌಲ್ಯಮಾಪನದ ಆಧಾರದ ಮೇಲೆ ಅಂತಿಮವಾಗಿರುತ್ತದೆ

❖ ಟೆಂಡರ್‌ಗಳ ಆರ್ಥಿಕ ಬಿಡ್ ತೆರೆದ ನಂತರ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಟೆಂಡರ್ ಕರೆದಿರುವ ಪ್ರಾಧಿಕಾರ ಹೊಂದಿರುತ್ತದೆ.

❖ ತಾಂತ್ರಿಕ ಪ್ರಸ್ತಾವನೆಯ ಮೌಲ್ಯಮಾಪನದಲ್ಲಿ ಉತ್ತೀರ್ಣಗೊಂಡ ಏಜನ್ಸಿ/ಸಂಸ್ಥೆ/ಸೊಸೈಟಿಗಳ ಆರ್ಥಿಕ ಪ್ರಸ್ತಾವನೆಗಳನ್ನು ಪರಿಗಣನೆ ಮಾಡಲಾವುದು.

❖ ತಾಂತ್ರಿಕ ಮೌಲ್ಯಮಾಪನದಲ್ಲಿ ಉತ್ತೀರ್ಣಗೊಂಡ ಏಜನ್ಸಿ/ ಸಂಸ್ಥೆಗಳ ಆರ್ಥಿಕ ಪ್ರಸ್ತಾವನೆ ಇ-ಪ್ರಕ್ಯೂರ್‌ಮೆಂಟ್ ವೆಬ್ ಪೋರ್ಟಲ್ (ವೆಬ್ ಸೈಟ್ ಹೆಸರು: https://eproc.karnataka.gov.in) ಮೂಲಕ ಮಾತ್ರ ತೆರೆಯಲಾಗುತ್ತದೆ.

❖ ಯಶಸ್ವಿ ಬಿಡ್ಡುದಾರರ ಜೊತೆಗೆ ಸಂಧಾನ ಮಾತುಕತೆ ನಡೆಸಿ, ಕರಾರು ಒಪ್ಪಂದ ಮಾಡಿಕೊಳ್ಳಲಾಗುವುದು.

**8. ಟೆಂಡರ್ ಗುತ್ತಿಗೆ ಕರಾರು ಒಪ್ಪಂದ ಮಾಡಿಕೊಳ್ಳುವ ಕುರಿತು.**

- ರೂ.200/- ಛಾಪಾ ಕಾಗದದ ಮೇಲೆ ಯಶಸ್ವಿ ಟೆಂಡರ್‌ದಾರರು ಜೊತೆಗೆ ಟೆಂಡರ್ ನಿಬಂಧನೆಗಳೊಂದಿಗೆ ಹಾಗೂ ಪ್ರತ್ಯೇಕವಾಗಿ ವಿಧಿಸಬಹುದಾದ ಷರತ್ತುಗಳನ್ನೊಳಗೊಂಡ ಕರಾರು ಪೊತ್ರಕ್ಕೆ ಸಹಿ ಮಾಡತಕ್ಕದ್ದು. ತದನಂತರದಲ್ಲಿ ಕಾರ್ಯಾದೇಶ ನೀಡಲಾಗುವುದು.

- ಸದರಿ ವ್ಯವಹಾರವು ಭಾರತದ ಸಾಮಾನ್ಯ ತೆರಿಗೆಗಳ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

**9. ಅಲ್ಪಾವಧಿ ಇ-ಟೆಂಡರ್ ಮೂಲಕ ಆಯ್ಕೆಯಾದ ಏಜನ್ಸಿ/ ಸಂಸ್ಥೆಗಳವರು ಕಡ್ಡಾಯವಾಗಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರ:**

✓ ಏಜನ್ಸಿ/ಸಂಸ್ಥೆಯಿಂದ ನೇಮಕಗೊಂಡ ನೌಕರರಿಗೆ ಭವಿಷ್ಯ ನಿಧಿ ಹಾಗೂ ಇ.ಎಸ್.ಐ ಸೌಲಭ್ಯವನ್ನು ನಿಯಮಾನುಸಾರ ಒದಗಿಸಬೇಕು. ನೌಕರರ ಭವಿಷ್ಯನಿಧಿ ಹಾಗೂ ಇ.ಎಸ್.ಐ ಕಟಾವಣೆ ಕುರಿತಾದ ವಿವರಗಳನ್ನು ಸದರಿ ಕಛೇರಿಗೆ ಪ್ರತಿ ತಿಂಗಳಿಗೊಮ್ಮೆ ಸಲ್ಲಿಸುವುದು.

✓ ವೃತ್ತಿ ತೆರಿಗೆ ಹಾಗೂ ಸೇವಾ ತೆರಿಗೆ ಪಾವತಿಸಿದ ಬಗ್ಗೆ ದಾಖಲೆಗಳನ್ನು ನೀಡುವುದು ಕಡ್ಡಾಯ.

✓ ಅನುಬಂಧ-2 ರಲ್ಲಿ ನಮೂದಿಸಿದ, ನಿಗದಿತ ಅರ್ಹತೆಯುಳ್ಳ ಸಿಬ್ಬಂದಿಗಳ ಶೈಕ್ಷಣಿಕ ಅರ್ಹತೆ ಹಾಗೂ ಅನುಭವ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಸದರಿ ಕಛೇರಿಯಲ್ಲಿ ಅನುಮೋದನೆ ಪಡೆದ ನಂತರವೇ ನೇಮಕ ಮಾಡಿಕೊಳ್ಳಬೇಕು.

✓ ಅಗತ್ಯ ಸಂದರ್ಭದಲ್ಲಿ ಸಿಬ್ಬಂದಿಯು ಕಛೇರಿ ಸಮಯದ ನಂತರ ಕಾರ್ಯ ನಿರ್ವಹಿಸಲು ಒಪ್ಪಬೇಕು. ಈ ಕುರಿತು ಏಜೆನ್ಸಿ/ಸಂಸ್ಥೆಯವರು ಸಂಬಂಧಿಸಿದ ಸಿಬ್ಬಂದಿಗಳಿಂದ ಒಪ್ಪಿಗೆ ಪತ್ರ ಪಡೆಯಬೇಕು.

✓ ಸಿಬ್ಬಂದಿಗೆ ಒಂದು ತಿಂಗಳಿಗೆ ಒಂದು ಸಾಂದರ್ಭಿಕ ರಜೆ ಸೌಲಭ್ಯವಿರುತ್ತದೆ. ಕ್ಯಾಲೆಂಡರ್ ವರ್ಷದೊಳಗೆ ಅವುಗಳನ್ನು ಉಪಯೋಗಿಸಬಹುದು. ನಂತರ ಸಂಚಯನಗೊಳ್ಳುವುದಿಲ್ಲ.

- ✓ ಹೆಚ್ಚುವರಿ ರಜೆಗಳನ್ನು ಪಡೆದಲ್ಲಿ ಅಂತಹ ದಿನಗಳಿಗೆ ಗೌರವಧನ ಕಟಾಯಿಸಿ, ಬಿಲ್ ಸಲ್ಲಿಸಬೇಕು.
- ✓ ಸಿಬ್ಬಂದಿಯು ಮೂರು ದಿನಗಳಿಗಿಂತ ಅಧಿಕವಾಗಿ ಅನುಮತಿ ಪಡೆಯದೆ ಗೈರು ಹಾಜರಾದರೆ, ಸದರಿ ಸಿಬ್ಬಂದಿ ಬದಲಿಗೆ ಪರ್ಯಾಯ ವ್ಯವಸ್ಥೆ ಮಾಡುವುದು. ಇಲ್ಲವಾದಲ್ಲಿ ಪ್ರತಿ ದಿನಕ್ಕೆ ರೂ.100/- ದಂಡ ವಸೂಲಿ ಮಾಡಲಾಗುವುದು.
- ✓ ಸಿಬ್ಬಂದಿಯು ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ ನಿಯೋಜಿಸುವ ಅಧಿಕಾರ ನಿಗಮಕ್ಕೆ ಇರುತ್ತದೆ.
- ✓ ಪ್ರವಾಸ ಭತ್ಯೆ / ದಿನ ಭತ್ಯೆ ನಿಯೋಜಿಸಲ್ಪಟ್ಟ ಸ್ಥಾನದಲ್ಲಿ ನೀಡಲಾಗುವುದಿಲ್ಲ.
- ✓ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಗುರುತಿನ ಚೀಟಿ/ ಸಮವಸ್ತ್ರ ನೀಡುವುದು.
- ✓ ಸಿಬ್ಬಂದಿಗಳಿಗೆ Group Insurance ಮಾಡಿಸುವುದು.
- ✓ ಸಿಬ್ಬಂದಿಗಳಿಗೆ ಪ್ರತಿ ತಿಂಗಳು Pay slip ನೀಡುವುದು ಹಾಗೂ ವೇತನವನ್ನು RTGS ಮೂಲಕ ಪಾವತಿಸುವುದು.

**10. ಅರೆಕಾಲಿಕ ಸಿಬ್ಬಂದಿಯ ಸೇವೆಯನ್ನು ಒದಗಿಸಲು ಬಿಲ್ ಪಾವತಿ ಕುರಿತು.**

ಬಿಲ್‌ನ ಮೊತ್ತದಲ್ಲಿ ಅನ್ವಯಿಸಬಹುದಾದ ಟಿ.ಡಿ.ಎಸ್ ಮತ್ತು ಜಿ.ಎಸ್.ಟಿ ಮೊತ್ತವನ್ನು ಕಟಾಯಿಸಿ, ಏಜೆನ್ಸಿ/ ಸಂಸ್ಥೆಯವರಿಗೆ ಪಾವತಿಸಲಾಗುವುದು/ನೀಡಲಾಗುವದು.

**11. ಇತರೆ ನಿಬಂಧೆಗಳು:**

- ಏಜನ್ಸಿ/ಸಂಸ್ಥೆಯವರು ಪ್ರತಿ ತಿಂಗಳು ಅರೆಕಾಲಿಕ ಸಿಬ್ಬಂದಿಗಳ ಸೇವೆ ಒದಗಿಸುವುದು. ಸಿಬ್ಬಂದಿಗಳ ಸಂಬಳವನ್ನು ಪೂರ್ವಭಾವಿಯಾಗಿ ತಮ್ಮ ಸ್ವಂತ ಹಣ ಭರಿಸಿ, ಪಾವತಿಸಿದ ಕಡಿತಗಳ ವಿವರಗಳನ್ನು ಆಯಾ ತಿಂಗಳು ಮುಗಿದ ನಂತರ ಸಂಬಂಧಪಟ್ಟ ಚಲನ್‌ಗಳ ದಾಖಲೆಗಳನ್ನು ಹಾಜರುಪಡಿಸಬೇಕು, ಯಾವುದೇ ಕಾರಣಕ್ಕೂ ಮರುಪಾವತಿ ಅಲ್ಲದೆ ಮುಂಗಡವಾಗಿ ಸಂಸ್ಥೆಯವರಿಗೆ ಹಣವನ್ನು ನೀಡಲಾಗುವುದಿಲ್ಲ.
- ಟೆಂಡರ್ ಕುರಿತು ಬಿಡ್‌ದಾರರು ಆಕ್ಷೇಪಿಸಿದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಎಸ್ಐಡಿಸಿ ಇವರು ಮೇಲ್ಮನವಿ ಪ್ರಾಧಿಕಾರವಾಗಿರುತ್ತಾರೆ.
- As per minimum wages Government order bearing No. KAE:83:LMW 2022 Dt:13.01.2023.
- ನಿಗಮ ಮತ್ತು ಸಂಸ್ಥೆಯವರ ಮಧ್ಯೆ ಗುತ್ತಿಗೆ ಅವಧಿಯಲ್ಲಿ ಅಥವಾ ಗುತ್ತಿಗೆ ಅವಧಿ ನಂತರ ಉದ್ಭವಿಸಬಹುದಾದ ತಕರಾರುಗಳನ್ನು ನ್ಯಾಯಾಲಯದಲ್ಲಿ ಮಾತ್ರ ಬಗೆಹರಿಸಿಕೊಳ್ಳುವುದು.

## ತಾಂತ್ರಿಕ ಟೆಂಡರ್ ಅರ್ಜಿ ನಮೂನೆ

(ಲಕೋಟೆ 1 ರಲ್ಲಿ ಸಲ್ಲಿಸತಕ್ಕದ್ದು)

| ಕ್ರ.ಸಂ | ವಿವರ | ಷರಾ |
|---|---|---|
| 1 | ಸಂಸ್ಥೆಯ ಹೆಸರು ಮತ್ತು ವಿಳಾಸ (ದೂರವಾಣಿ ಅಥವಾ ಮೊಬೈಲ್ ಸಂಖ್ಯೆ) | |
| 2 | ಕಾರ್ಮಿಕ ಇಲಾಖೆಯಲ್ಲಿ ನೋಂದಣಿ ಮಾಡಿರುವ ಹಾಗೂ ನವೀಕರಿಸಿರುವ ನೋಂದಣಿ ಪತ್ರ ಸಲ್ಲಿಸುವುದು. | |
| 3 | ಸಂಸ್ಥೆಯ ಪಾನ್ ಸಂಖ್ಯೆ ಪ್ರತಿ ಲಗತ್ತಿಸುವುದು ಹಾಗೂ ಇತ್ತೀಚಿನ ಎರಡು ಪಾಸ್ ಪೋರ್ಟ್ ಸೈಜ್ ಭಾವಚಿತ್ರವನ್ನು ಸಲ್ಲಿಸುವುದು. | |
| 4. | ಸಂಸ್ಥೆಗೆ ಸಂಬಂಧಿಸಿದಂತೆ ಇ.ಎಸ್.ಐ, ಇಪಿಎಫ್, ವೃತ್ತಿ ತೆರಿಗೆ ಹಾಗೂ ಸೇವಾ ತೆರಿಗೆ ನೋಂದಣಿ ಪತ್ರಗಳನ್ನು ದೃಢೀಕರಿಸಿ ಸಲ್ಲಿಸುವುದು. | |
| 5 | 2021-22 ಮತ್ತು 2022-23ನೇ ಸಾಲಿನಲ್ಲಿ ಪಾವತಿಸಿದ ಇ.ಎಸ್.ಐ ಮತ್ತು ಇ.ಪಿ.ಎಫ್ ವೃತ್ತಿ ತೆರಿಗೆಯ ಇತ್ತೀಚಿನ ಚಲನ್ ಪ್ರತಿಗಳನ್ನು ಸಲ್ಲಿಸುವುದು. | |
| 6 | 2021-22 ಮತ್ತು 2022-23ನೇ ಸಾಲಿನಲ್ಲಿ ಪಾವತಿಸಿದ ಸೇವಾ ತೆರಿಗೆ ಚಲನ್ ಪ್ರತಿಗಳನ್ನು ಸಲ್ಲಿಸುವುದು | |
| 7 | 2021-22 ಮತ್ತು 2022-23ನೇ ಅಸಿಸ್‌ಮೆಂಟ್ ಸಾಲಿನಲ್ಲಿ ಪಾವತಿಸಿದ ಆದಾಯ ತೆರಿಗೆ ಚಲನ್ ಅಧಿಕೃತ ಚಾರ್ಟ್‌ಡ್ ಅಕೌಟೆಂಟ್ ಅವರಿಂದ ದೃಢೀಕರಿಸಿದ ಪ್ರತಿಗಳನ್ನು ಸಲ್ಲಿಸುವುದು. | |
| 8 | 2021-22 ಮತ್ತು 2022-23ನೇ ಸಾಲಿನ ಆರ್ಥಿಕ ವರ್ಷಗಳ ಲೆಕ್ಕಗಳನ್ನು ನೊಂದಾಯಿತ ಚಾರ್ಟ್‌ಡ್ ಅಕೌಂಟೆಂಟ್ ರವರಿಂದ ತಪಾಸಣೆ ಮಾಡಿಸಿರುವ ಬಗ್ಗೆ ಅಡಿಟ್ ವರದಿಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು. | |
| 9. | ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆ/ ಸಿಬ್ಬಂದಿ ಸೇವೆಯನ್ನು ಒದಗಿಸಿರುವ ಬಗ್ಗೆ ಕಳೆದ 3 ವರ್ಷಗಳ ಸೇವಾ ಅನುಭವ ದೃಢೀಕರಣ ಪತ್ರ ಸಲ್ಲಿಸುವುದು | |
| 10 | ಸಂಸ್ಥೆಯ ಸರ್ಕಾರದ ಇತರೆ ಯಾವುದೇ ಇಲಾಖೆಯಲ್ಲಿ ಕಪ್ಪು ಪಟ್ಟಿಗೆ ಸೇರಿಲ್ಲದ ಬಗ್ಗೆ ದೃಢೀಕರಣ, ನೋಟರಿಯವರಿಂದ ರೂ.100/-ರ ಮೌಲ್ಯದ ಇ-ಸ್ಟಾಂಪಿಂಗ್ ಟೆಂಡರ್ ಪ್ರಕಟಣೆ ಹೊರಡಿಸಿದ ದಿನಾಂಕದ ನಂತರ ಪಡೆದು ಸಲ್ಲಿಸುವುದು. | |
| 11 | ಸಂಸ್ಥೆಯ ಆರ್ಥಿಕ ವಹಿವಾಟಿನ ಬಗ್ಗೆ ಚಾರ್ಟೆಡ್ ಅಕೌಂಟೆಂಟೆ ರವರಿಂದ ದೃಢೀಕೃತ ಲೆಕ್ಕಪತ್ರಗಳನ್ನು ಸಲ್ಲಿಸುವುದು. | |

ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ಹಾಗೂ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತುಗಳಿಗೆ ಬದ್ಧನಾಗಿರುತ್ತೇನೆ ಹಾಗೂ ಒಪ್ಪಿರುತ್ತೇನೆ.

ಸಂಸ್ಥೆಯ ಮುಖ್ಯಸ್ಥರ ಸಹಿ ಮೊಹರಿನೊಂದಿಗೆ

# ಟೆಂಡರ್‌ದಾರರ ಘೋಷಣೆ

1) ತಾಂತ್ರಿಕ ಬಿಡ್ ಮತ್ತು ಅರ್ಥಿಕ ಬಿಡ್‌ಗೆ ಸಂಬಂಧಿಸಿದಂತೆ ಲಗತ್ತುಗಳನ್ನು ಅರ್ಜಿಯ ಜೊತೆಯಲ್ಲಿ ಲಗತ್ತಿಸಿರುತ್ತಾರೆ.

2) ಟೆಂಡರ್‌ನ ಎಲ್ಲಾ ನಿಬಂಧನೆಗಳ ಮತ್ತು ಷರತ್ತುಗಳನ್ನು ಸರಿಯಾಗಿ ಓದಿ ತಿಳಿದುಕೊಂಡಿದ್ದೇನೆ ಮತ್ತು ಟೆಂಡರ್ ಅವಧಿಯಲ್ಲಿ ಷರತ್ತಿನನ್ವಯ ಮೇಲಿನ ದರದಲ್ಲಿ ಒದಗಿಸಲು ಬದ್ಧನಾಗಿರುತ್ತೇನೆ.

3) ನಾನು ಕರಾರು ಪತ್ರವನ್ನು ನಿಗದಿತ ಅವಧಿಯಲ್ಲಿ ಸಲ್ಲಿಸಿರುತ್ತೇನೆ.

4) ಟೆಂಡರ್‌ಗೆ ಸಂಬಂಧಿಸಿದಂತೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಎಸ್‌ಐಡಿಸಿ ಇವರು ವಿಧಿಸುವ ಷರತ್ತಿಗೆ ಬದ್ಧನಾಗಿರುತ್ತೇನೆ.

5) ನಿಗಮದ ನೀತಿ ಮತ್ತು ನಿಯಮಕ್ಕೆ ಧಕ್ಕೆಯಾಗದಂತೆ ಸೇವೆ ಒದಗಿಸುತ್ತೇನೆ.

ಟೆಂಡರ್ ನೀತಿ ನಿಯಮಗಳನ್ನು ತಿಳಿದುಕೊಂಡಿದ್ದೇನೆ. ಟೆಂಡರ್ ದಾಖಲೆಯಲ್ಲಿ ಸೂಚಿಸಿರುವ ಪ್ರತಿಯೊಂದು ಷರತ್ತುಗಳನ್ನು ಒಪ್ಪಿರುತ್ತೇನೆ.

ಟೆಂಡರ್‌ದಾರರ ಸಹಿ
ಹಾಗೂ ಮೊಹರು

## ಒದಗಿಸಬೇಕಾದ ಸಿಬ್ಬಂದಿ ವಿವರ (ವಿದ್ಯಾರ್ಹತೆ ಮತ್ತು ಅನುಭವ)

| ಕ್ರ. ಸಂ | ಹುದ್ದೆಯ ವಿವರ | ಒದಗಿಸಬೇಕಾದ ಸಿಬ್ಬಂದಿಗಳ ಸಂಖ್ಯೆ | ಸಂಚಿತ ಸಂಭಾವನೆ ಪ್ರತಿ ತಿಂಗಳು (ಪ್ರತಿ ಹುದ್ದೆಗೆ) ಇ.ಪಿ.ಎಫ್ ಮತ್ತು ಇ.ಎಸ್.ಐ ಹಾಗೂ ಜಿಎಸ್‌ಟಿ ಮತ್ತು ಪಿ.ಟಿ . ಸೇರಿ ಒಟ್ಟು | ವಿದ್ಯಾರ್ಹತೆ |
|---|---|---|---|---|
| 1 | ಸಹಾಯಕ ಅಭಿಯಂತರರು, | 9 ಸಂಖ್ಯೆ | | BE, CIVIL ENGINEERING |

***Experience:*** *Minimum 3 years Experience in construction and Maintenance of Buildings, Roads, Sanitary, Pump House, Preparation of DPR, Drafting of Industrials plots and Sheds with CAD knowledge for CIVIL Engineering Candidate, preparation of Estate sketch, knowledge of Survey (digital / Analog) and others as per the requirement of KSSIDC*

- ***Electrical Engineer:*** *Minimum 3 years Experience in Maintenance of Electrical internal works creating electrical designs, plans using detailed drawings.*
- *Preparing estimates and budjects.*
- *Creating accurate project specification.*
- *Creating technical reports.*
- *Completing regulatory documents concerning dafety issues.*
  *Design of circuits, Boards, Lighting instruments and AIR CONDITIONERS*
  *Analyse linear systems using liners systems theory.*
  *Prepare an operational plan.*
  *Inspecting electronic equipment.*
  *Installation of Borewells, transformers, insulators, cables.*
  *Knowledge of Transformers / Generator Installation and Testing and others as per the requirement of KSSIDC.*

## DETAILS OF WAGES FOR AE's PER MONTH

| SALARY | PRICE |
|---|---|
| BASIC WAGES | 27865 |
| VDA | 1114 |
| PF @ 13 % ON Rs. 15000/- | 1950 |
| TOTAL | 30929 |
| Service charge | To be quoted in percentage (not exceeding tender value) |
| Total (Inclusive of GST) | |